ಅಧ್ಯಕ್ಷರು.—ತಿದ್ದುಪಡಿ ಸಭೆಯ ಅನುಮತಿಯ ಮೇರೆಗೆ ವಾಪಸ್ಸು ಪಡೆಯಲಾಯಿತು.

ಖಂಡ ೨

ಅಧ್ಯಕ್ಷರು.—" ಖಂಡ ೨ ಈ ವಿಧೇಯಕದ ಅಂಗವಾಗಿರುತ್ತದೆ "

(ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು)

(ಖಂಡ ೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಸ್ತಾಪವನ್ನು ಮಂಡಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮತಿ ಲೀಲಾದೇವಿ ಪ್ರಸಾದ್‌ರವರು ಪ್ರಸ್ತಾಪ ಮಾಡಿರುವ ವಿಷಯವಾಗಿ ಹೇಳುವುದಾದರೆ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಕೂಡ ಈ ಕಾನೂನಿನಲ್ಲಿ ಅವಕಾಶ ಇದೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ " ೧೯೫೬ರ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಅಂಗೀಕರಿಸಲಾಯಿತು

೧೯೫೬ನೇ ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿ ಹಾಗೂ ನಿರ್ಮೂಲನ ತಿದ್ದುಪಡಿ ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, "೧೯೫೬ನೇ ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿ ಹಾಗೂ ನಿರ್ಮೂಲನ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ ಸಂಬಂಧಪಟ್ಟ ಜಮೀನಿಗೆ ಪರಿಹಾರ ಕೊಡುವಂಥಾದ್ದು ಹಿಂದಿನಿಂದಲೂ ಬಂದಿದೆ. ಈಗ ಅದನ್ನು ೧೦೦ಕ್ಕೆ ಬದಲಾಗಿ ೩೦೦ರಷ್ಟು ಕೊಡಬೇಕೆಂದು ತಿದ್ದುಪಡಿ ತರಲಾಗಿದೆ. ಅದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ನನ್ನ ವಿರೋಧ ಇದೆ. ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟ ಆಕ್ಟ್‌ನ್ನು ನಾನೇ ತಂದಿದ್ದೆ. ದಕ್ಷಿಣ ಭಾರತದಲ್ಲಿ ಕೊಳಚೆ ಪ್ರದೇಶಗಳು ಏನಿವೆ, ಅವುಗಳನ್ನು ಯಾವರೀತಿ ಅಭಿವೃದ್ಧಿ ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಿ ಇದನ್ನು ತೆಗೆದುಕೊಂಡು ಬರಲಾಗಿತ್ತು. ಆದರೆ, ಈ ಕಾನೂನನ್ನು ಪರಿಣಾಮಕಾರಿಯಾಗಿ ಕಾರ್ಯಗತ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಲೇ ಇಲ್ಲ. ಕಾರಣ ಏನೆಂದರೆ, ಸರ್ಕಾರದಲ್ಲಿ ಸಾಕಷ್ಟು ಹಣ ಇಲ್ಲ. ಯಾವ ಯಾವ ಬಾಬಿನಿಂದ ಹಣವನ್ನು ಅಳವಡಿಸಬೇಕೆಂದು ಕಾನೂನಿನಲ್ಲಿ ಅಳವಡಿಸಿದ್ದಾರೋ, ಆ ಬಾಬಿನಿಂದ ಹಣ ಪಡೆಯುವಂಥ ಪ್ರಯತ್ನವನ್ನು ಮಾಡಿಯೇ

ಇಲ್ಲ. ಈ ಮಂಡಲಿಗೆ ಸ್ವತಂತ್ರ ಬಂದವೇಲೆ ಹಣವೂ ಇಲ್ಲ, ಅಧಿಕಾರವೂ ಇಲ್ಲ. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾದರೆ, ಎ.ಸಿ. ಯೇ ಬರಬೇಕಂ, ತಹಶೀಲ್ದಾರ್‌ರವರೇ ಕೆಲಸ ಮಾಡಬೇಕು. ಇದರಿಂದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವುದರಲ್ಲಿ ತಡವಾಗುತ್ತದೆ. ಮಾನ್ಯ ಲಕ್ಷ್ಮೀಸಾಗರ್‌ರವರೇ ನಾವು ಮಾಡುವುದಕ್ಕೆ ಆಗಲಿಲ್ಲ. ಜನತಾ ಸರ್ಕಾರದವರು ಪರಿಣಾಮಕಾರಿಯಾಗಿ ಬಡವರ ಉದ್ಧಾರ ಮಾಡುತ್ತೇವೆಂದಂ ಭಾವಚಿತ್ರ ಹಾರಿಸಿಕೊಂಡು ಹೊರಟಿದ್ದೀರಿ. ನೀವು ಮಾಡಿ. ನೀವು ತರುವಂಥ ಕಾನೂನುಗಳಿಗೆ ವಿಧೇಯಂಕಗಳಿಗೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ನಾವು ತಕರಾರು ಮಾಡಿಲ್ಲ. ನೀವು ಒಳ್ಳೆಯ ಕೆಲಸ ಮಾಡಿ. ಕೊಳಚೆ ಪ್ರದೇಶಗಳ ಜನರ ಸ್ಥಿತಿಯನ್ನು ಸುಧಾರಣೆ ಮಾಡಿ ಜಮೀನನು ದಾರರಿಗೆ ಮಾರ್ಕೆಟ್ ಪ್ರೈಸ್ ಕೊಡಬೇಕೆಂದು ನಾವೇ ಜಮೀನಿನ ಬೆಲೆಯನ್ನು ಏರಿಸಿದ್ದೆವು. ಇವತ್ತು ರೂಪಾಯಿ ಬೆಲೆ ಕಡಿಮೆಯಾಗಿದೆ. ರಾಜ್ಯಾಂಗವನ್ನು ತಿದ್ದುಪಡಿ ಮಾಡಿಯಾದರೂ ಮಾರ್ಕೆಟ್ ರೇಟ್ ಪ್ರಕಾರ ಪರಿಹಾರ ಕೊಡಬೇಕಾಗುತ್ತದೆ. ಇದರ ವ್ಯಾಪ್ತಿಯಲ್ಲಿ ಬರತಕ್ಕ ಜಮೀನುದಾರರು ಕೆಲವರು ಸಾಹುಕಾರರಾಗುತ್ತಾರೆ, ಕೆಲವರು ಬಡವರಾಗುತ್ತಾರೆ. ಇದರ ಬಗ್ಗೆ ಕೂಡ ತಾವು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಕರ್ನಾಟಕ ಕೊಳಚೆ ಪ್ರದೇಶ ಅಭಿವೃದ್ಧಿ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಎರಡು ಮಾತುಗಳನ್ನು ಹೇಳುತ್ತೇನೆ. ಕಳೆದ ಹದಿಮೂರು ವರ್ಷಗಳಿಂದ ಇಲ್ಲಿಯವರೆಗೆ ಖಾಸಗೀ ಜಮೀನು ತೆಗೆದುಕೊಳ್ಳತಕ್ಕ ವಿಚಾರದಲ್ಲಿ ಫೈನಲ್ ನೋಟಿಫಿಕೇಷನ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಖಾಸಗೀ ಜಮೀನಂ ಮಾಲೀಕರು ಕೋರ್ಟಿಗೆ ಹೋಗುತ್ತಾರೆ. ಇದರಿಂದ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಈ ರೀತಿ ಬಿಲ್ ತರುವುದಕ್ಕೆ ಬದಲು ಎಲ್ಲಾ ವಿಷಯಂಗಳನ್ನು ಒಳಗೊಂಡಂಥ ಕಾಂಪ್ರಹೆನ್ಸೀವ್ ಬಿಲ್ ತಂದರೆ ಮಾತ್ರ ಸರ್ಕಾರ ತನ್ನ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ಬಿ. ಡಿ. ಎ.ಗೆ ಸಂಬಂಧಪಟ್ಟಂತ ಜಮೀನಿನಲ್ಲಿ, ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಜಮೀನಿನಲ್ಲಿ ಕೊಳಚೆ ಪ್ರದೇಶಗಳು ಇರುವುದನ್ನು ನೋಡುತ್ತೇವೆ. ಅವುಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ನಮ್ಮಲ್ಲಿ ಫಂಡ್ ಇಲ್ಲ. ಬೋರ್‌ವೆಲ್ ರಿಪೇರಿ ಮಾಡಿಸುವುದಕ್ಕೆ ದುಡ್ಡಿಲ್ಲ. ಅವುಗಳ ಮೆಯಿಂಟೆನೆನ್ಸ್‌ಗೋಸ್ಕರ ಸ್ಲಂ ಕ್ಲಿಯರೆನ್ಸ್ ಬೋರ್ಡಿನಲ್ಲಿ ಹಣವಿಲ್ಲ. ಆ ಬೋರ್ಡಿನ ಛೇರ್ಮನ್ನರಿಗೆ ಯಾವುದೇ ಅಧಿಕಾರ ಇಲ್ಲ. ಇಂಥ ಸಮಸ್ಯೆಗಳನ್ನೆಲ್ಲಾ ಪರಿಹರಿಸಲು ಸ್ಲಂ ಕ್ಲಿಯರೆನ್ಸ್ ಬೋರ್ಡನ್ನು ಒಂದೇ ಏಜೆನ್ಸಿ ಮಾಡಬೇಕೆಂದು ನಾನಂ ಹೇಳುತ್ತೇನೆ. ರಾಜ್ಯದಲ್ಲಿ ಸ್ಲಂ ಬೆಳೆಯುವುದನ್ನು ತಡೆಗಟ್ಟಬೇಕಾಗುತ್ತದೆ. ರಾಜ್ಯಕ್ಕೆ ಇಬ್ಬರು ಇಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಇದ್ದಾರೆ. ಅವರು ಬೆಂಗಳೂರಿನಲ್ಲಿದ್ದಾರೆ. ಅವರಿಗೆ ಯಾವುದೇ ಸಿಬ್ಬಂದಿ ವರ್ಗ ಇಲ್ಲ. ಹೀಗಾಗಿ ಹೊಸ ಸ್ಲಂಗಳನ್ನು ತಡೆಗಟ್ಟುವುದಕ್ಕೆ ಅವರಿಂದ ಸಾಧ್ಯವಾಗುತ್ತಿಲ್ಲ. ಸ್ಲಂ ತಡೆಗಟ್ಟದೆ ಎಷ್ಟು ಕೆಲಸ ಮಾಡಿದರೂ ಪ್ರಯೋಜನವಾಗುವುದಿಲ್ಲ, ಹೊಸ ಸ್ಲಂಗಳು ಬೇಕಾದಷ್ಟು ಬರುತ್ತವೆ. ಮಹಾರಾಷ್ಟ್ರದಲ್ಲಿ ಯಾವ ರೀತಿ ಮಾಡಿದ್ದಾರೆ, ಆ ರೀತಿ ಇಲ್ಲಿಯೂ ಮಾಡಿದರೆ ಸ್ಲಂಗಳು ಬರುವುದನ್ನು ತಡೆಗಟ್ಟಬಹುದು. ಅದಂ ಇಲ್ಲದೇ ತಾವು ಯಾವುದೇ ಕಾನೂನನು ತಂದರೂ ಸಣ್ಣ ಸಣ್ಣ ಜಾಗಗಳಲ್ಲಿ ಸ್ಲಂ ಬಂದಿದೆ. ದೊಡ್ಡ ಹಿಡುವಳಿದಾರರ ಜಮೀನಿನಲ್ಲೂ ಕೂಡ ಕೆಲವು ಕಡೆ ಸ್ಲಂಗಳು ಬಂದಿವೆ. ಅವುಗಳನ್ನು ಕ್ಲಿಯರ್ ಮಾಡದೆ ಏನೂ ಮಾಡುವುದಕ್ಕಾಗುವುದಿಲ್ಲ. ಅವರ ವಸತಿ ಸೌಕರ್ಯಕ್ಕೋಸ್ಕರ ಮಾರ್ಕೆಟ್ ರೇಟ್ ಕೊಟ್ಟರೂ ಪರವಾಗಿಲ್ಲ ಮಾರಾಟ ಮಾಡಲು ಇಚ್ಛೆವುಳ್ಳ ಜಮೀನ್ದಾರರಿಂದ ಜಮೀನನ್ನು ತೆಗೆದುಕೊಂಡು ಅವರಿಗೆ ಅನುಕೂಲ ಮಾಡಿಕೊಡಲು ಆದಷ್ಟು ಜಾಗ್ರತೆ ಕ್ರಮ ಕೈಗೊಳ್ಳಬೇಕಾಗಿದೆ. ಕೆಲವು ಕಡೆ ಲ್ಯಾಪೆಟ್ರಿಗಳು ಇರುವುದಿಲ್ಲ. ಕೆಲವು ಕಡೆ ಲ್ಯಾಪೆಟ್ರಿ ಕಟ್ಟುವುದಕ್ಕೆ ಜಾಗ ಇರುವುದಿಲ್ಲ. ಆ ಪ್ರದೇಶಗಳಲ್ಲಿ ಮಾಸಮಾಡತಕ್ಕ ಹೆಂಗಸರು ತುಂಬಾ ಕಷ್ಟದಲ್ಲಿದ್ದಾರೆ. ಒಂದು ಬಿಲ್ಲನ್ನು ತಂದು ಲ್ಯಾಂಡ್ ಅಕ್ವಿಜಿಷನ್ ಆ್ಯಕ್ಟ್ ಪ್ರಾವಿಸೋ ತೆಗೆದುಹಾಕಿದರೂ ಪರವಾಗಿಲ್ಲ. ಕಾಂಪನ್‌ಸೇಷನ್ ವಿಚಾರದಲ್ಲಿ ಬೇಕಾದರೆ ಕೋರ್ಟಿಗೆ ಹೋಗಲಿ. ಆದಷ್ಟು ಜಾಗ್ರತೆ ಸ್ಲಂನಲ್ಲಿರತಕ್ಕವರಿಗೆ ಸಾಕಷ್ಟು ಸೌಲಭ್ಯವನ್ನು ಒದಗಿಸಿಕೊಡಬೇಕಂ. ಇದೆಲ್ಲವನ್ನು ಸೇರಿಸಿ ಒಂದು ಕಾಂಪ್ರಹೆನ್‌ಸೀವ್ ಬಿಲ್ಲನ್ನು ತರಬೇಕೆಂದು ಸಚಿವರನ್ನು ಕೇಳಿಕೊಳ್ಳುತ್ತೇನೆ.

† SRI BLASIUS M. D'SOUZA(Mangalore).—Mr. Speaker, Sir, hon. Members who spoke earlier on this bill have already pointed out that this Karnataka Slum Areas (Improvement and Clearance) (Amendment) Bill, 1986, does not fulfill the desire of the weaker section of the society. The slums which are growing in city has to be stopped and alternate accommodation should be provided to the present slum dwellers. Regarding slum clearance I should say it is the responsibility of the Slum Clearance Board to stop new slums coming in the city. Now, through this Bill it is proposed to enhance the rate of compensation from 100 times to 300 times of the property tax I would request the Hon'ble Minister to change it for calculating the property tax to annual ratable value because the property tax varies from municipality to municipality and Corporation to Corporation and those who get this compensation do not get proper compensation designed Under the Act I would request the Hou'ble Minister instead of saying 100 times to 300 times of the property tax to change it over to annual ratable value so that in any place in Karnataka State the compensation will be the same.Finally, I would request the Hon'ble Minister to take serious note of the slums which are coming up in cities, Unless we stop these slums growing in cities or town municipalites either the municipalites or cities in the State will never be able to grow in an healthy atmosphere.

ಶ್ರೀ ಎ. ಲಕ್ಷ್ಮೀಸಾಗರ್. (ಕಾನೂನು, ಸಂಸದೀಯ ಹಾಗೂ ನಗರಾಡಳಿತ ಸಚಿವರು)—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವಲಿಂಗಪ್ಪನವರು ಹಲವಾರು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಒಂದು ಸಾರಿ ಜಾಸ್ತಿ ಕೊಡಿ, ಮಾಡಿ ಎನ್ನುತ್ತಾರೆ; ಇನ್ನೊಂದು ಸಾರಿ ಜಾಸ್ತಿ ಕೊಡಬೇಡಿ ಎನ್ನುತ್ತಾರೆ. ವಸ್ತು ಸ್ಥಿತಿಯನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಂ. ಬೆಂಗಳೂರಿನಲ್ಲಿ ಸಾರ್ವಜನಿಕ ಉದ್ಯಮಂಕ್ಕೆ ಜಮೀನು ತೆಗೆದುಕೊಳ್ಳುವ ಸಂದರ್ಭದಲ್ಲಿ ಜಮೀನ್ದಾರರ ಒಪ್ಪಿಗೆ ಪಡೆದು ಹಣ ಜಾಸ್ತಿ ಆದರೆ ಕೊಡಿ ಎನ್ನುತ್ತಾರೆ. ಕೆಲವರು ಕೋರ್ಟಿಗೆ ಹೋಗುತ್ತಾರೆ; ಆದರೂ ಇತ್ಯರ್ಥವಾಗುವುದಿಲ್ಲ, ಬೆಲೆ ಜಾಸ್ತಿಯಾಗುತ್ತದೆ. ಕೇಂದ್ರದಲ್ಲಿ ಲ್ಯಾಂಡ್ ಅಕ್ವಿಸಿಷನ್ ಆಕ್ಟನ್ನು ಬದಲಾವಣೆ ಮಾಡಿದ್ದಾರೆ. ಒಂದು ಬೆಲೆಯನ್ನು ನಾವು ನಗದಿ ಮಾಡದಿದ್ದರೆ ಕೇಳಿದ ಹಿರಿಹಿಗ್ಗು ಜಾಸ್ತಿ ಕೊಡಬೇಕಾಗುತ್ತದೆ. ಸಾರ್ವಜನಿಕ ಉದ್ದೇಶಕ್ಕೊಸ್ಕರ ಏನು ಜಮೀನಂ ಪಡೆಯಬೇಕೆಂದು ಮಾಡಿದ್ದಾರೆ ಅದು ಈಗ ಸಫಲವಾಗುತ್ತಿಲ್ಲ. ಆದೇ ರೀತಿ ಇಲ್ಲಿಯೂ ಆಗುತ್ತದೆ. I agree that the ratable value itself varies from place to place. not necessarily confined to one place. It all depends on the value of land in a town or a city. Consistent with that the proprety tax will be taken into consideration for the purpose of evaluation of fixing of the compensation payable to him. I believe it is reasonable in the situation and therefore my submission is that this may be passed.

ಅಧ್ಯಕ್ಷರು.—ಪರ್ಯಾಲೋಚನಾ ಪ್ರಸ್ತಾವ ಹೀಗಿದೆ.

"ಗೌರವನೀಯ ಇಸವಿಯ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಹಾಗೂ ನಿರ್ಮೂಲನೆ) (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸಬೇಕಾಗಿದೆ."

ಪ್ರಸ್ತಾವವನ್ನು ಅನುಮೋದಿಸಲಾಯಿತಂ.

ಅಧ್ಯಕ್ಷರು.—ಖಂಡ-2ಕ್ಕೆ ಶ್ರೀ ಆರ್. ವೆಂಕಟರಾಮಯ್ಯನವರು ತಿದ್ದುಪಡಿ ಸೂಚನೆ ಕೊಟ್ಟಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ. ನನ್ನ ತಿದ್ದುಪಡಿ ಈ ರೀತಿ ಇದೆ.

After the clause 2 the following proviso shall be inserted.

"Provided that the benefit shall only apply to small and middle class land holders"

Question was Proposed

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಕೊಳಚೆ ಪ್ರದೇಶ ಸೃಷ್ಟಿಯಾಗಿದೆ. ಅದನ್ನು ಏನನ್ನು ಮಾಡುತ್ತೀರಿ? ಮಾನ್ಯ ಜಾರ್ಜ್ ಅವರು ಭಾಷಣ ಮಾಡುವಾಗ ಸ್ಲಂ ಕ್ಲಿಯರ್ ಮಾಡುವ ಸ್ಕ್ಯಾಂಡ್ ತೆಗೆದುಕೊಳ್ಳುವುದಿಲ್ಲವೆಂದು ಅಂದುಕೊಂಡಿದ್ದೆ ಎಂದರು, ಸ್ಲಂ ಕಾನೂನಿಂವಾಗಿ ಕ್ಲಿಯರ್ ಮಾಡಬೇಕೆಂಬ ಸ್ಕ್ಯಾಂಡ್ ತೆಗೆದುಕೊಂಡರೆ ಅನ್ಯಾಯ.

ಶ್ರೀ ಕೆ. ಜೆ. ಜಾರ್ಜ್.—ನಾನು ಆಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಮಾಡಬೇಕೆಂದು ಹೇಳಿದ್ದೆ.

ಶ್ರೀ ಆರ್ ವೆಂಕಟರಾಮಯ್ಯ.—ಬಲಾತ್ಕಾರ ಮಾಡಿ ಕೊಳಚೆ ಪ್ರದೇಶಗಳನ್ನು ಬಿಡಿಸುವ ಕಾರ್ಯ ಮುಂದುವರಿಯುತ್ತಿದೆ ಎಂದು ನಿನ್ನೆ ಮೊನ್ನೆ ಪತ್ರಿಕೆಗಳಲ್ಲಿಸಹ ನೋಡಿದೆ. ಇದು ತುಂಬಾ ಅನ್ಯಾಯ. ಆದರಲ್ಲಿ ಸ್ಲಂ ಇಂಪ್ರೂವ್‌ಮೆಂಟ್ ಎಷ್ಟು ಎಕ್ವಿಷಿಷನ್ ಎಷ್ಟು ಎಂದು ಹೇಳಿಲ್ಲ. ಎಕ್ವಿಷಿಷನ್ ಮಾಡುವುದಕ್ಕೆ ಹೋಗಿಲ್ಲ. ನಮ್ಮ ಮುಳುಬಾಗಿನಲ್ಲಿ ಳೆ ವರ್ಷದಿಂದ ಇದರ ವ್ಯವಹಾರ ನಡೆಯುತ್ತಿದೆ. ಇದರಲ್ಲಿಅರ್ಥ ಮಾಡಿಕೊಳ್ಳಬೇಕಾದುದು ಬೇಕಾದಷ್ಟು ಇದೆ ಲ್ಯಾಂಡ್ ಲಾರ್ಡ್ಸ್‌ನಿಂದ ಪೊದಲಿನಿಂದ ಲಕ್ಷಾಂತರ ರೂಪಾಯಿಗಳನ್ನು ವಸೂಲ್ಮಾಡಿದ್ದಾರೆ, ಕೇವ್ ಕಡೆ ಬಿಡಿಸುವುದಕ್ಕೆ ಸಾಧ್ಯವಿಲ್ಲದೆ ಬಿಟ್ಟಿದ್ದಾರೆ. ದುಡ್ಡು ವಸೂಲ್ಮಾಡಿಲ್ಲ. ಅವರು ಏನೂ ಸಂಪಾದಿಸಿಲ್ಲ ಎಂದು ತಿಳಿದುಕೊಂಡಿರುವುದು ತಪ್ಪು. ಸ್ಲಂನಲ್ಲಿ ಒಗ್ಗಟ್ಟು ಜಾಸ್ತಿ ಇರುವುದರಿಂದ ಅಂಥ ಪರಿಸ್ಥಿತಿ ಇದೆ. ಅಂಥವರಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಡುವುದು ಬೇಡ. ಇರತಕ್ಕ ದುಡ್ಡಿನಲ್ಲಿ ಅವರಿಗೆ ಆಸ್‌ಬೆಸ್ಟೊ ಷೀಟ್‌ಗಳನ್ನು ಕೊಡಿಸದರೆ ಲಕ್ಷ್ಮೀಸಾಗರ್‌ದವರನ್ನು ನೆನಸಿಕೊಳ್ಳುತ್ತಾರೆ. ಅವರ ಕೈಗೆ ದುಡ್ಡು ಕೊಟ್ಟರೆ ತಮಗೆ ಬೇಕಾದುದನ್ನು ತೆಗೆದುಕೊಂಡು ಹೋಗಿ ಉಪಯೋಗಿಸಿ ಬಿಸಾಕುತ್ತಾರೆ, ಆದ್ದರಿಂದ ದುಡ್ಡು ಕೊಡುವುದು ಮಾತ್ರ ಬೇಡ ಎಂದು ಹೇಳುತ್ತೇನೆ. ಕೆಲವು ಸ್ಲಂಗಳಲ್ಲಿ ಬೇಕಾದರೆ ಲ್ಯಾಂಡ್ ಎಕ್ವಿಷಿಷನ್ ಪ್ರೊಸೀಡಿಂಗ್ಸ್ ತೆಗೆದು ಕೊಳ್ಳಲಿ. ಆದರೆ ವೆಸ್ಟೆಟ್ ಇಂಟರೆಸ್ಟ್‌ನ ಏನಿದ್ದಾರೆ ಅವರನ್ನು ಮರೆಯಬಾರದು. ಅವರ ಬಗ್ಗೆ ಎಚ್ಚರಿಕೆ ವಹಿಸಬೇಕು ಜೊತೆಗೆ ತಿರ್ಯಪ್ಪ ಪರಿಹಾರ ಎಂದು ಕೊಟ್ಟಿದ್ದೀರಿ. ಇದು ತುಂಬಾ ಜಾಸ್ತಿ. ಇದನ್ನು ಕೊಡುವುದು ಬೇಡ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಮತ್ತು ನನ್ನ ತಿದ್ದುಪಡಿಯನ್ನು ಒತ್ತಾಯ ಮಾಡುತ್ತೇನೆ. ಲ್ಯಾಂಡ್‌ಲಾರ್ಡ್‌ಗಳಿಗೆ ಕೊಡುವ ಬದಲು ಸ್ಲಂ ಅಭಿವೃದ್ಧಿಗೆ ಉಪಯೋಗಿಸಿ ಎಂದು ಹೇಳುತ್ತೇನೆ. ಲ್ಯಾಂಡ್‌ಲಾರ್ಡ್ಸ್‌ಗೆ ಕೊಡುವುದು ನ್ಯಾಯಬದ್ಧವಲ್ಲ.

೧೨-೩೦ ಪಿ. ಎಂ,

ಶ್ರೀ ಎ. ಲಕ್ಷ್ಮೀಸಾಗರ್.—ಇವರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಇದಕ್ಕೆ ಉತ್ತರ ಕೊಡಬೇಕಾದ ಅವಶ್ಯಕತೆ ಇಲ್ಲ. ಮಾನ್ಯ ಸದಸ್ಯರು ತಿದ್ದುಪಡಿಯನ್ನು ವಾಪಸ್ ತೆಗೆದು ಕೊಂಡರೆ ಒಳ್ಳೆಯದು.

ಶ್ರೀ ಆರ್. ವೆಂಕಟರಾಮಯ್ಯ.—ತೆಗೆದುಕೊಳ್ಳುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಬೇಡ ಬಿಡಿ

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

"After the clause 2, the following proviso shall be in serted; provided that the benefit shall only apply to small and middle class land holders"

(Motion was negatived)

೨ನೇ ಖಂಡ

ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು.—"೨ನೇ ಖಂಡವು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯಂ"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು ಮತ್ತು ಎರಡನೆಯ ಖಂಡವು ವಿಧೇಯಕದ ಅಂಗವಾಯಿತು

ಪ್ರಥಮ ಖಂಡ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ "ಪ್ರಥಮ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯಂ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಪ್ರಥಮ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಯಿತು.

ಅಂಗೀಕಾರ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿ ನಿರ್ಮೂಲನ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿ, ನಿರ್ಮೂಲನ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ದೊರಕಿತು

೧೯೮೬ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ; ನಮ್ಮ ರಾಜ್ಯದಲ್ಲಿ ಈಗ ೨೪೨ ಪುರಸಭೆಗಳು, ನಗರಸಭೆಗಳು ಮತ್ತು ಆರು ಕಾರ್ಪೋರೇಷನ್‌ಗಳು ಇವೆ. ಎಲ್ಲಾ ಕಡೆ ಕುಡಿಯುವ ನೀರಿನ ಅಭಾವ ಕಂಡುಬರುತ್ತಿದೆ. ಈ ಅಭಾವ ಮುಂದಿನ ವರ್ಷಗಳಲ್ಲಿ ಕಡಿಮೆಯಾಗುತ್ತದೆಂದು ನಮಗನ್ನಿಸುವುದಿಲ್ಲ. ಪ್ರತಿಯೊಂದು ನಗರಸಭೆ ಮತ್ತು ಪುರಸಭೆಗಳಲ್ಲಿ ನೀರಿನ ಸರಬರಾಜಿನ ಬಗ್ಗೆ ಪದೇಪದೇ ಬೇಡಿಕೆಗಳು ಬರುತ್ತಿದ್ದು ಅದಕ್ಕೆ ಹಣ ಸಾಕಷ್ಟು ಸಾಲದು ಎಂಬ ಮಾತು ಕೇಳಿ ಬರುತ್ತಿದೆ. ಸರ್ಕಾರ ಪ್ರತಿವರ್ಷ ನೀಡಿ ಪಡಿಸಿರತಕ್ಕ ಹಣ ಏನೇನೂ ಸಾಲದಾಗಿದೆ. ಸರ್ಕಾರವೇ ಎಲ್ಲವನ್ನೂ ಭರಿಸುವುದಕ್ಕಾಗುವುದಿಲ್ಲ ಎಂದು ಮನವರಿಕೆಯಾಗಿರುವುದರಿಂದ ಕಾರ್ಪೋರೇಷನ್ ಮಂತ್ತು ನಗರ ಸಭೆ ಮತ್ತು ಪುರಸಭೆಗಳಿಗೆ